ಸುಲೋಚನ ಜಿ. ರಾವ್, ಬೆಂಗಳೂರು
ಆನ್‌ಲೈನ್ ತರಗತಿಗಳಿಂದ ವಿದ್ಯಾರ್ಥಿಗಳು ಗಳಿಸಿದ್ದೇನು, ಕಳೆದುಕೊಂಡಿದ್ದೇನು?



ಗಳಿಸಿದ್ದು ಮೊಬೈಲ್/ಲ್ಯಾಪ್‌ಟಾಪ್, ಕಳೆದುಕೊಂಡಿದ್ದು ಬಾಲ್ಯ, ವಿಟಮಿನ್ ಡಿ.

ಚಿದಾನಂದ, ಜವನಗೊಂಡನಹಳ್ಳಿ
ಹಣ, ಆಸ್ತಿ ಇರದಿದ್ದರೂ ಮಕ್ಕಳನ್ನು ಪಡೆಯುವುದು ದೇಶದ ಪ್ರಗತಿಗೆ ಪೂರಕವೆನಿಸುತ್ತದೆ. ನೀವೇನಂತೀರಿ?
ಹಾಗಿದ್ದರೆ ಇಲಿಗಳು, ಕೋಳಿಮರಿಗಳಿಂದ ದೇಶ ಹುಚ್ಚಾಪಟ್ಟೆ ಪ್ರಗತಿ ಕಾಣಬೇಕಿತ್ತು!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ನಿನಗೆ ಕಾದೈತೆ... ಮೈಗೆ ಎಣ್ಣೆ ಹಚ್ಚಿಕೊ... ಅಂತಾರೆ. ಹಾಗಂದ್ರೆ ಏನು ರಾಮ್?
ಅದೊಂದು ಪುರಾತನ 'ಕಜ್ಜಾಯ ವಿತರಣಾ ಸಂಘ'ದ ಸ್ಲೋಗನ್.

ರಾಜೇಶ್ವರಿ, ಬೆಂಗಳೂರು
ನಾನು ಯಾವಾಗಲೂ ಮಾಸ್ಕ್ ಧರಿಸುವುದು ಭಯದಿಂದಲ್ಲ, ಅನ್ಯರಿಗೆ ತೊಂದರೆಯಾಗದಿರಲೆಂದು ಎಂದರೆ ಜನ ನಂಬುತ್ತಿಲ್ಲವಲ್ಲಾ...?



ಬಿಳಿಚುಮುಖ, ಗಾಬರಿಕಣ್ಣು ತುಟಿ ಹೇಳದ್ದನ್ನು ಹೇಳಿವೆಯಂತೆ.

ಎನ್. ವೈದೇಹಿ, ಮೈಸೂರು
ಹಲ್ಲಿದ್ದವರಿಗೆ ಕಡಲೆ ಇಲ್ಲ. ಕಡಲೆ ಇದ್ದವರಿಗೆ ಹಲ್ಲಿಲ್ಲ. ಎರಡೂ ಇಲ್ಲದವರಿಗೆ?
ಪಾಕಂಪೊಪ್ಪಿನ ನೆನಪಲ್ಲಿ ಬೊಚ್ಚುಬಾಯಲ್ಲಿ ಜೊಲ್ಲು.

ಚಂದನ್, ಬಾಳ್ಳುಪೇಟೆ
ಸವಾಲುಗಳ ಬೆನ್ನಟ್ಟುವ ಮನುಜನಿಗೆ ಕೊರೊನಾ ಒಂದು ಕಷ್ಟವೇ?
ಅರಿಯನ್ನು ಅರಿಯುವವರೆಗೆ ಆತಂಕ ಅನಿವಾರ್ಯವೇ.

ಪಿ. ಜಯವಂತ ಪೈ, ಕುಂದಾಪುರ
ಮನುಷ್ಯನಿಗೂ ಪ್ರಾಣಿಗೂ ವ್ಯತ್ಯಾಸವೇನು?
ಪ್ರಾಣಿಗಳಿಗೆ ಏನು, ಎಷ್ಟು ತಿನ್ನಬೇಕೆಂಬ ತಿಳಿವಳಿಕೆ ಇರುತ್ತದೆ.

ಬಿ.ಆರ್. ಉಷಾ, ಬೆಂಗಳೂರು
ಹತ್ತಿರ ಇರುವ ಆಸ್ಪತ್ರೆಯ ಹೆಸರು ನರಕ ಅಂತ. ಹೋಗಲೋ ಬೇಡವೋ?
ಸಾವು ಆಸ್ಪತ್ರೆಯ ಬ್ರ್ಯಾಂಚ್ ಇರಬೇಕು. ಪ್ರಾಮಾಣಿಕತೆಗೆ ಮೆಚ್ಚಿ ಹೋಗಿ.

ಸೇತುರಾವ್ ಕುಲಕರ್ಣಿ, ಬೆಂಗಳೂರು
ಮನುಷ್ಯನ ಯಾವ ಗುಣಗಳಿಗೆ 'ಆಷಾಢಭೂತಿ' ಎನ್ನುವರು?
ಆಷಾಢದ ಗಾಳಿಯಂತೆಯೇ ಸಿಕ್ಕಿದ್ದೆಲ್ಲವನ್ನೂ ಹಾರಿಸಿಕೊಂಡು ಹೋಗುವ ಗುಣಕ್ಕೆ.

ಜಗದೀಶ್ ಬಿ. ಹೊಸೂರು. ಮೈಸೂರು
ಕದ್ದ ಹೂಗಳಿಂದ ಮಾಡಿದ ಪೂಜಾಫಲ ಯಾರಿಗೆ ದೊರೆಯುತ್ತದೆ?
ಕದ್ದವನಿಗೇ ಅಂತೆ ಮುಡಿಯೇರುತ್ತಿದ್ದುದನ್ನು ಗುಡಿಗೇರಿಸಿದ್ದಕ್ಕೆ.

ಎಚ್.ಆರ್. ಪ್ರಕಾಶ್, ಹೊಸನಗರ
'ಮಹಾಭಾರತ'ದಲ್ಲಿ ಶ್ರೀಕೃಷ್ಣನ ಗೀತೋಪದೇಶ ಕೇಳಿದ್ದೀವಿ. ಪ್ರಜಾಭಾರತದಲ್ಲಿ ನಿಮ್ಮ ಉಪದೇಶ...?
ದೇಶವು ಅನ್ಯದೇಶದ ಉಪದೇಶ ಆಗದಂತೆ ನೋಡಿಕೊಳ್ಳಿ ಎಂಬುದಷ್ಟೆ.

ನಾಗೇಶ್ ಮೈಸೂರು, ಸಿಂಗಪುರ
ನಿದ್ರಾಂಗನೆಯ ಬಗ್ಗೆ ಬರೆದವರಿಗೆ ಪ್ರಶಸ್ತಿ ಬಂದಿದೆ. ಓದಿ ಅದರ ಸೆಳವಿನಲ್ಲಿ ಸಿಕ್ಕವರಿಗೆ?
ಕಿರುನಗೆ ಮೂಡಿರುತ್ತದಲ್ಲ! ಹಾಸ್ಯಪ್ರಿಯರಿಗೆ ನಗೆಯೇ ಒಲಿಂಪಿಕ್ ಗೋಲ್ಡ್.

ಎಸ್.ಸಿ. ರಮೇಶ್, ಮೈಸೂರು
ಮಠಾಧೀಶರು ದುರಾಚಾರಿಗಳಿಗೂ, ಸಂಚುಕೋರರಿಗೂ ಒಳೊಳಗೇ ಆಶೀರ್ವಾದ ಮಾಡುವುದರ ಮರ್ಮವೇನು?
ಯಾರೇ ಬಂದರೂ ಅವರ ತಲೆಯ ಮೇಲೆ ಕೈ ಇಡುವುದು ಇವರ ಸಂಪ್ರದಾಯ.

## ಬಹುಮಾನಿತ ಪ್ರಶ್ನೆ

ಪಿ.ಜಿ. ರಾಘವೇಂದ್ರ, ಮೈಸೂರು
ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆಗೂ, ಚುನಾವಣಾಪೂರ್ವ ನಾಯಕ ಪತ್ತೆಗೂ ವ್ಯತ್ಯಾಸ?
ಕಾಲಕ್ರಮೇಣ ನಾಯಕರ ವಚನ, ವಿ(ವಿಚ್ಛಿದ್ರ)ಭಕ್ತಿಗಳು ಬದಲಾಗುವ ಸಾಧ್ಯತೆ ಇರುತ್ತದೆ

ಬಿ. ಚಂದ್ರೇಗೌಡ, ಬೆಂಗಳೂರು
ಇಲ್ಲೊಬ್ಬರು ತಮ್ಮ ಮಕ್ಕಳಿಗೆ ಚರಣ, ಪಲ್ಲವಿ ಅಂತ ಹೆಸರಿಟ್ಟಿದ್ದಾರಲ್ಲಾ...?
ಇವರು ಹಾಡುವ ರಾಗಕ್ಕೆ, 'ತಟ್ಟುವ' ತಾಳಕ್ಕೆ ಹೊಂದಿಕೊಳ್ಳಬಹುದೆಂದು.

ಬಿದರಹಳ್ಳಿ ನಾಗರಾಜ, ಹಿರೇಹಡಗಲಿ
ಡ್ರೆಸ್‌ಗೂ, ಅಡ್ರೆಸ್‌ಗೂ ಇರುವ ವ್ಯತ್ಯಾಸವೇನು?
ಡ್ರೆಸ್ ನೆನೆಯಬಾರದು; ಅಡ್ರೆಸ್ ನೆನೆಯಬೇಕು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ತಾಳ್ಮೆ ಇರುವ ರಾಮನಿಗೂ, ತಾಳ್ಮೆ ಇರದ ಪರಶುರಾಮನಿಗೂ ಇರುವ ವ್ಯತ್ಯಾಸವೇನು?



ಪಿತ್ರಾರ್ಜಿತ ಗುಣವೇ; ದಶರಥ ನಿಧಾನಸ್ಥ; ಜಮದಗ್ನಿ ಕೋಪಿಷ್ಠ.

ಮಂಡಿ ಕುಮಾರ್, ಬೆಂಗಳೂರು
ಸಾವಿನಲ್ಲೂ ಸಂತೋಷ ಕಾಣುವುದು ಹೇಗೆ?
ವೈಕುಂಠದಂದು ಸತ್ತವರ ಹೆಸರಿನಲ್ಲಿ ನಮಗಿಷ್ಟವಾದ ಅಡುಗೆ ಮಾಡಿಸಿಕೊಂಡು.

ನರಸಿಂಹಾರೆಡ್ಡಿ, ಸೇಡಂ
ಈ ನಡುವೆ ಮಾತೆತ್ತಿದರೆ ಹೈಕಮಾಂಡ್ ಎನ್ನುತ್ತಿದ್ದಾರೆ. ನಮಗೆ ನಿಜವಾದ ಹೈಕಮಾಂಡ್ ಯಾರು?
ಐ ಕಮಾಂಡ್‌ನಲ್ಲೇ ಕಂಟ್ರೋಲ್ ಇಟ್ಟಿರುವ ನಮ್ಮನಮ್ಮ ಮನೆಯವರು.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in